ಓಎಸ್ ನಂ. 09/2016 ಡಿಡಬ್ಲ್ಯೂ - 3 ಹೆಸರು - ಸರೋಜಮ್ಮ

ಸಾಕ್ಷಿಯನ್ನು ದಿನಾಂಕಃ 05.12.2019 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ಎಲ್ ವಿ ಆರ್ ವಕೀಲರಿಂದ ಃ

ಬೆಳೆ ದೃಢಿಕರಣ ಪತ್ರವನ್ನು ನಿಡಿ 21 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಎಂ ಸಿ ಎಸ್ ವಕೀಲರಿಂದ

1) ವಾದಿ ನನ್ನ ಮೈದುನ. ವಾದಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕಿದೆ ಎಂದರೆ ನಿಜ. ನನ್ನ ಗಂಡ ಮನೆ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಮನೆ ವ್ಯವಹಾರ ಕೃಷ್ಣೆಗೌಡ ಮಾಡುತ್ತಾರೆ ಎಂದರೆ ನಿಜ. 2001 ರಲ್ಲಿ ನಾನು 3 ಆಸ್ತಿಗಳನ್ನು ಖರೀದಿ ಮಾಡಿರುತ್ತೇನೆ. ವಾದಿ ಮತ್ತು ಪ್ರತಿವಾಗಳು ವ್ಯವಸಾಯವನ್ನು ಬಿಟ್ಟು ಬೇರೆನೂ ಮಾಡುವುದಿಲ್ಲ ಎಂದರೆ ನಿಜ. ವಾದಿ ಮತ್ತು ಪ್ರತಿವಾದಿ ಕುಟುಂಬದಲ್ಲಿ ನನ್ನ ಗಂಡ ವಿದ್ಯಾವಂತ ಎಂದರೆ ನಿಜ. ಮಂಚೇಗೌಡರ ಆಸ್ತಿಯಲ್ಲಿ ಪಂಪಸೆಟ್ಟ ಇದೆ ಎಂದರೆ ಸರಿಯಲ್ಲ. ಸದರಿ ಜಮೀನು ಕಾವೇರಿ ಹೊಳೆ ಪಕ್ಕದಲ್ಲಿ ಎಂದರೆ ನಿಜ. ಸದರಿ ಹೊಳೆಯಿಂದ ಪಂಪಸೆಟ ದಿಂದ ನೀರು ತೆಗೆಯುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಕಬ್ಬು, ಬತ್ತ ವಾಣಿಜ್ಯ ಬೆಳೆಗಳನ್ನು ಬೆಳೆದು ವರ್ಷಕ್ಕೆ 3 ರಿಂದ 4 ಲಕ್ಷ ಅದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ನನ್ನ ಗಂಡ ಒಟ್ಟು ಕುಟುಂಬದ ಆಸ್ತಿಯಿಂದ ಬಂದ ಆದಾಯದಿಂದ ನನ್ನ ಹೆಸರಿಗೆ ಕ್ರಯಪತ್ರವನ್ನು ಬರೆಸಿರುತ್ತಾರೆ ಎಂದರೆ ಸರಿಯಲ್ಲ . 13 ಗುಂಟೆ ಆಸ್ತಿಯನ್ನು ನನ್ನ ಮಾವನಿಂದ ನಾನು ಪಿತ್ರಾರ್ಜಿತ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ನಿಜ.

2) ಸದರಿ ಕ್ರಯಪತ್ರಕ್ಕೆ ವಾದಿ ಮತ್ತು ಪ್ರತಿವಾದಿಗಳು ಸಹಿ ಮಾಡಿಲ್ಲ ಎಂದರೆ ವಾದಿ ಸಹಿ ಮಾಡಿರುತ್ತಾರೆ, ಹೆಣ್ಣು ಮಕ್ಕಳು ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ವಾದಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರವನ್ನು ನನ್ನ ಮಾವನಿಂದ ಮೋಸದಿಂದ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಿತಾರ್ರ್ಜಿತ ಆಸ್ತಿಯಿಂದ ಬಂದ ಆದಾಯದಿಂದ ಆಸ್ತಿಗಳನ್ನು ವಾದಿಗೆ ಮೋಸ ಮಾಡಲು ನನ್ನ ಗಂಡ ನನ್ನ ಹೆಸರಿಗೆ ಕ್ರಯಪತ್ರ ಬರೆಸಿರುತ್ತಾರೆ ಎಂದರೆ ಸರಿಯಲ್ಲ ನನ್ನ ತಂದೆ ನೀಡಿದ ಆಸ್ತಿಯಿಂದ ನನಗೆ ಯಾವುದೇ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ನನ್ನ

ತಂದೆ ನೀಡಿದ  ಸ್ವತ್ತನ್ನು ನನ್ನ ಅಣ್ಣ ತಮ್ಮಂದಿರು ಮಾಡಿರುತ್ತಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಮಾಡಿಸಿ ಆದಾಯ ನನಗೆ ತಂದು ಕೊಡುತ್ತಾರೆ ಎಂದು ಹೇಳುತ್ತಾರೆ.  ನನ್ನ ತಂದೆ ನನಗೆ ಸದರಿ ಆಸ್ತಿಯಿಂದ ಬಂದ ಆದಾಯವನ್ನು ನೀಡಿರುವುದಕ್ಕೆ ದಾಖಲೆ ಇರುವುದಿಲ್ಲ.  ಸಾಕ್ಷಿಯು ಈಗಲೂ ಸಹ ಸದರಿ ಆಸ್ತಿಯನ್ನು ನನ್ನ ತಂದೆ ಮಾಡಿಸಿರುತ್ತಾರೆ ಎಂದು ಹೇಳುತ್ತಾರೆ.  ವಾದಿಗೆ ಆಸ್ತಿ ಕೊಡ ಬೇಕಾಗುತ್ತದೆ ಎಂದು ನಾನು ಮತ್ತು ನನ್ನ ಗಂಡ ದಾಖಲಾತಿಗಳನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.  ನನ್ನ ತಂದೆ ಮನೆಯಿಂದ ಬಂದ ಆದಾಯದಿಂದ ಆಸ್ತಿಗಳನ್ನು ಖರೀದಿ ಮಾಡಿರುತ್ತೇನೆ ಎಂದು ಕ್ರಯಪತ್ರದಲ್ಲಿ ಬರೆದಿಲ್ಲ ಎಂದರೆ ನಿಜ .  ನನ್ನ ಹೆಸರಿಗೆ ಮಾಡಿರುವ ಕ್ರಯಪತ್ರದ ಆಸ್ತಿಗಳ ಮೇಲೆ ವಾದಿಗಳು ಸಹ ಹಕ್ಕಿದೆ ಎಂದರೆ ಸರಿಯಲ್ಲ .

ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ